
ಮೋಹನ ಸೀತನೂರ

ಮೂಲತಃ ಗುಲ್ಬರ್ಗದವರಾದ ಮೋಹನ ಸೀತನೂರ ಬಾಲ್ಯದಿಂದಲೇ ಕಲಾಲೋಕಕ್ಕೆ ತೆರೆದುಕೊಂಡವರು. ತಮ್ಮ ತಂದೆಯ ಪರಿಚಿತರು ಹಾಗೂ ಅವರ ಸ್ನೇಹಿತರಾದ ಕಲಾವಿದ ಜೆ.ಎಸ್. ಖಂಡೇರಾವ್ ಅವರು ಕಿರಾಣಾ ಬಜಾರ್‌ನಲ್ಲಿ ಆರಂಭಿಸಿದ ಕಲಾಶಾಲೆಗೆ ಸೇರಿದಾಗ ಮೋಹನ ಆರನೇ ತರಗತಿ ವಿದ್ಯಾರ್ಥಿಯಾಗಿದ್ದರು. ರೇಖೆಗಳ ಜೊತೆಗಿನ ಒಡನಾಟ–ಬಣ್ಣಗಳ ಜೊತೆಗಿನ 'ಆಟ' ಆರನೇ ಕ್ಲಾಸ್‌ನಿಂದ ಮುಂದಕ್ಕೆ ಹೋಗದಂತೆ ತಡೆಯಿತು. ಅದರಿಂದ ಬೇಸತ್ತು 'ಇದರ ಸಹವಾಸವೇ ಬೇಡ' ಎಂದು ದೂರ ಹೋದರೂ ಆಸಕ್ತಿ ದೂರವಾಗಲಿಲ್ಲ. ಎಸ್ಸೆಸ್ಸೆಲ್ಸಿ ಮುಗಿಸಿದ ನಂತರ ಕೆಲಕಾಲ ಮುಂಬೈನಲ್ಲಿದ್ದು ಸ್ಕ್ರಿನ್‌ಪ್ರಿಂಟಿಂಗ್‌ನಲ್ಲಿ ತೊಡಗಿದ್ದ ಮೋಹನ ಅವರು ನಂತರ ವಿ.ಜಿ. ಅಂದಾನಿ ಅವರ 'ಐಡಿಯಲ್ ಫೈನ್ ಆರ್ಟ್' ಶಾಲೆ ಸೇರಿ ಕಲಾಭ್ಯಾಸ ನಡೆಸಿದರು. ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದ ಮೋಹನ ಅವರು ನಂತರ ನಶಿಸಿಹೋಗುತ್ತಿರುವ ಗ್ರಾಮೀಣ ಬದುಕಿನ ಚಿತ್ರಗಳನ್ನು 'ಕಾಲ್ಪನಿಕ' ರೇಖೆಗಳಲ್ಲಿ ದಾಖಲಿಸಿದರು. ಸಾಂಪ್ರದಾಯಿಕ ಚಿತ್ರಶೈಲಿಯ ಕಲಾವಿದ ವೈ. ಸುಬ್ರಹ್ಮಣ್ಯರಾಜು ಅವರ ನಿರ್ದೇಶನದಲ್ಲಿ ಬೆಂಗಳೂರಿನಲ್ಲಿ ನಡೆದ 'ಪರಂಪರೆ' ಕುರಿತ ಒಂದು ವರ್ಷದ ತರಬೇತಿಯಲ್ಲಿ ಪಾಲುಗೊಂಡಿದ್ದರು.

ಬೆಂಗಳೂರಿನಲ್ಲಿ ಇದ್ದಾಗಲೇ ಕೆನ್ ಶಾಲೆಯಲ್ಲಿ ಕಲಾವಿದ ಸುಲ್ತಾನ್ ಅಲಿ ಅವರು ಕಲಾಕೃತಿ ರಚಿಸುವುದನ್ನು ನೋಡುವ ಅವಕಾಶ ದೊರೆಯಿತು. ಕ್ಯಾನ್ವಾಸ್ ಮೇಲೆ ಆ್ಯಕ್ರಿಲಿಕ್ ಬಣ್ಣಗಳನ್ನು ಧಾಳಾಗಿ ಬಳಸಿ ನಂತರ ಅದರ ಮೇಲೆ ಆಯಿಲ್‌ಕಲರ್ ಬಳಸುವ ಪರಿಪಾಠ ರೂಢಿಸಿಕೊಂಡರು. 1988ರ ನಂತರ ಆ್ಯಕ್ರಿಲಿಕ್ ಬಣ್ಣ ಬಳಸಿ ಕಲಾಕೃತಿ ರಚಿಸಲು ಆರಂಭಿಸಿದರು. ಲಾತೂರು ಭೂಕಂಪದ ಅನುಭವದ ಪ್ರೇರಣೆಯಿಂದ ರಚಿಸಿದ 'ಅರ್ತ್ ಫಿಶ್' ಅವರಿಗೆ ಜನಪ್ರಿಯತೆಯನ್ನು ತಂದುಕೊಟ್ಟಿತು. ಅದಕ್ಕಿಂತ ಮುಂಚೆ 'ಆತ್ಮ ವ್ಯಾಖ್ಯಾನ' ಸರಣಿಯ ಕಲಾಕೃತಿಗಳನ್ನು ರಚಿಸಿದ್ದರು.

ಗುಲ್ಬರ್ಗ ಮತ್ತು ಸುತ್ತಲಿನ ಪ್ರದೇಶದಲ್ಲಿ ಕಂಡ ಗ್ರಾಮೀಣ ದೇವತೆಗಳು, ದೇಗುಲಗಳ ಪ್ರಭಾವ–ಪ್ರೇರಣೆಗಳ ಇಂಪ್ರೆಶನ್ ಬಳಸಿ ರೂಪಿಸಿದ ಕಲಾಕೃತಿಗಳಲ್ಲಿ ಪರಂಪರೆ ಮತ್ತು ಜಾನಪದೀಯ ಅಂಶಗಳ ಹದವಾದ ಮಿಶ್ರಣ ನೋಡಲು ಸಿಗುತ್ತದೆ. ಈ ಸರಣಿಯಲ್ಲಿನ 40ಕ್ಕೂ ಹೆಚ್ಚು ಕಲಾಕೃತಿಗಳು ಮನಸ್ಸಿಗೆ ಮುದ ನೀಡುತ್ತವೆ.

ಬಿಳಿ ಸುಣ್ಣದ ಗೋಡೆಯ ಮೇಲೆ ಆಗಾಗ ಸುರಿದ ಜಾಜ (ಕೆಂಪುಬಣ್ಣ) ಕಾಲಾನಂತರದಲ್ಲಿ ವರ್ಣಮಯ ಲೋಕ ಅನಾವರಣ ಉಂಟು ಮಾಡುತ್ತದೆ. ಅದನ್ನು ಕಲಾಕೃತಿಗಳಲ್ಲಿ ದಾಖಲಿಸುವ 'ಫ್ಲೋ' ಸರಣಿಯ ನಂತರ ಅದರ ಮುಂದುವರಿಕೆಯಾದ 'ವಾಲ್' ಸರಣಿಯ ಕಲಾಕೃತಿ ರಚನೆಯಲ್ಲಿ ತೊಡಗಿಕೊಂಡಿದ್ದಾರೆ.

